

> ನಮ್ಮನ್ನು ಆಯ್ಕೆ ಮಾಡಿದರೆ ಪ್ರತಿವರ್ಷ ೨ ಕೋಟಿಯಷ್ಟು ಉದ್ಯೋಗಗಳನ್ನು ಸೃಷ್ಟಿಸುತ್ತೇವೆ.
>
> ಪ್ರಧಾನಮಂತ್ರಿ ಮೋದಿ
> **(2013)**

# ಉದ್ಯೋಗ, ವೇತನ ಮತ್ತು ಅಸಮಾನತೆ

**11 MARCH 2024**

TEN YEARS OF NDA · A GUARANTEE CHECK ·

ಇಲ್ಲಿ ಪ್ರಸ್ತುತಪಡಿಸಲಾದ ಡೇಟಾ ಮತ್ತು ವಿಶ್ಲೇಷಣೆಯು ಸಾರ್ವಜನಿಕವಾಗಿ ಲಭ್ಯವಿರುವ ಸರ್ಕಾರಿ ಡೇಟಾವನ್ನು ಆಧರಿಸಿದೆ. ನಾವು ಪಿರಿಯಾಡಿಕ್ ಲೇಬರ್ ಫೋರ್ಸ್ ಸಮೀಕ್ಷೆ (PLFS) ಮತ್ತು ಈಗ ಸ್ಥಗಿತಗೊಂಡಿರುವ ಉದ್ಯೋಗ-ನಿರುದ್ಯೋಗ ಸಮೀಕ್ಷೆಯಿಂದ ಡೇಟಾವನ್ನು ಬಳಸಿದ್ದೇವೆ. ಈ ವಿಶ್ಲೇಷಣೆಯು 2022-23ನೇ ಸಾಲಿನಲ್ಲಿ ದೇಶದ 49 ಕೋಟಿ ಕಾರ್ಮಿಕರ ಸ್ಥಿತಿಗತಿಯ ಬಗ್ಗೆ ಬೆಳಕು ಚೆಲ್ಲುತ್ತದೆ.

# ಒಕ್ಕೂಟ ಸರ್ಕಾರ ಹೇಳುತ್ತಿರುವುದೇನು

**2**

ಕೋಟಿ ಉದ್ಯೋಗಗಳನ್ನು
ಸೃಷ್ಟಿಸುತ್ತೇವೆ

"ಉದ್ಯೋಗ ಮತ್ತು ಸ್ವ-ಉದ್ಯೋಗದ ಅವಕಾಶಗಳು ಎಲ್ಲರಿಗೂ ಸಮಾನವಾಗಿ ದೊರೆಯುತ್ತಿವೆ"

ಪ್ರಧಾನಮಂತ್ರಿ ಮೋದಿ (2022)

ಇಂದು ಭಾರತದ ಪ್ರಗತಿಪಥ ಮತ್ತು ಪ್ರಗತಿಯ ಗತಿಯು ಎಲ್ಲಾ ಕ್ಷೇತ್ರಗಳಲ್ಲೂ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತಿದೆ

ಪ್ರಧಾನಮಂತ್ರಿ ಮೋದಿ (2022)

ವಾಸ್ತವ

# ಸರ್ಕಾರದ ಅಂಕಿ-ಸಂಖ್ಯೆಗಳು ಏನು ಹೇಳುತ್ತಿವೆ?

**ಬೇರೆ ಬೇರೆ ಉದ್ಯೋಗಗಳಲ್ಲಿ ತೊಡಗಿಸಿಕೊಂಡಿದ್ದ ಕೆಲಸಗಾರರ ಶೇಕಡಾವಾರು ಪ್ರಮಾಣ - ೨೦೧೧-೧೨ ಮತ್ತು ೨೦೨೨-೨೩**

| **Table 1*** | SELF EMPLOYMENT | | CASUAL EMPLOYMENT | | REGULAR SALARY | |
|---|---|---|---|---|---|---|
| Year | Male | Female | Male | Female | Male | Female |
| 2011-2012 | 51.5% | 56.5% | 28.2% | 28.7% | 20.3% | 14.8% |
| 2022-2023 | 53.4% | 64.3% | 22.8% | 17.1% | 23.8% | 18.6% |

2011-12 ಹಾಗೂ 2022-23 ರ ನಡುವಿನ ಹತ್ತು ವರ್ಷಗಳ ಅವಧಿಯಲ್ಲಿ ಸ್ವ-ಉದ್ಯೋಗಿಗಳ ಪ್ರಮಾಣ ಹೆಚ್ಚಾಗಿದೆ. ಅರ್ಧಕ್ಕಿಂತಲೂ ಹೆಚ್ಚು ಪುರುಷರು ಮತ್ತು ಮೂರರಲ್ಲಿ ಎರಡು ಭಾಗಕ್ಕಿಂತ ಹೆಚ್ಚು ಮಹಿಳೆಯರು ಈಗ '**ಸ್ವ-ಉದ್ಯೋಗಿಗಳು**'. ಇದರಲ್ಲಿ ಗ್ರಾಮೀಣ ನೇಕಾರರು, ಕೃಷಿಕಾರರು, ಕುಂಬಾರರು, ನಗರಗಳ ಬೀದಿ ಬದಿ ವ್ಯಾಪಾರಿಗಳು, ದರ್ಜಿಗಳು, ಕ್ಷೌರಿಕರು ಮೊದಲಾದವರೆಲ್ಲರೂ ಸೇರಿದ್ದಾರೆ. ಜೊತೆಗೆ ಗೃಹಾಧಾರಿತ ಸಣ್ಣ ಉದ್ಯಮಗಳಲ್ಲಿ ತೊಡಗಿರುವ ವೇತನರಹಿತ ಕೆಲಸಗಾರರೂ ಇದೇ ವರ್ಗಕ್ಕೆ ಬರುತ್ತಾರೆ.

ಸ್ವ-ಉದ್ಯೋಗ ಎಂಬ ಪದ ಕೇಳಲು ಚೆಂದವೆನಿಸಿದರೂ, **ವಾಸ್ತವದಲ್ಲಿ ಸಾಮಾಜಿಕ ಸುರಕ್ಷತೆ ಇರುವ, ನಿಗಧಿತ ವೇತನ ನೀಡುವ ಕೆಲಸಗಳ ಸಂಖ್ಯೆ ಬಹಳ ಕಡಿಮೆಯಾಗಿವೆ**. ಅದರಿಂದಾಗಿ, ಕಡಿಮೆ ಆದಾಯ ತಂದುಕೊಡುವ ಸ್ವ- ಉದ್ಯೋಗವನ್ನೇ ಜನರು ಅವಲಂಬಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಹಸಿವು ಮತ್ತು ಸಾವಿಗೆ ಹೆದರಿ ಸ್ವ - ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ.

ಬಡ ಕುಟುಂಬಗಳ ಆದಾಯವು ಸ್ಥಗಿತಗೊಂಡಾಗಲೆಲ್ಲಾ ಅನಿವಾರ್ಯವಾಗಿ ಮಹಿಳೆಯರು ಸಹಾಯಕಿಯಾಗಿಯೋ, ತಮ್ಮ ಕುಟುಂಬದ ಹೊಲಗಳಲ್ಲಿಯೋ, ಸಣ್ಣ ಅಂಗಡಿಗಳಲ್ಲಿಯೋ  ದುಡಿಯಬೇಕಾಗುತ್ತದೆ. ಅವು ದುಡಿಮೆಯೇ ಆಗಿದ್ದರೂ, ಆದಾಯ ಇರುವುದಿಲ್ಲ.ಇದರಿಂದಾಗಿ ಆದಾಯವೇ ನೀಡದ ಕೆಲಸಗಳನ್ನು ಕೈಗೆತ್ತಿಗೊಂಡಂತಾಗುತ್ತದೆ. ಐದು ವರ್ಷಗಳ ಹಿಂದೆ ಆದಾಯವಿಲ್ಲದ ಕುಟುಂಬಗಳಲ್ಲಿ ಸಹಾಯಕರಾಗಿ ತೊಡಗಿಸಿಕೊಂಡ ಮಹಿಳೆಯರ ಪ್ರಮಾಣ **ಪ್ರತಿ 4 ಮಹಿಳೆಯರಿಗೆ ಒಬ್ಬರಿದ್ದರೆ, ಆ ಪ್ರಮಾಣ ಗಣನೀಯವಾಗಿ ಹೆಚ್ಚಾಗಿದ್ದು ಈಗ, ಪ್ರತಿ 3 ಮಹಿಳೆಯರಲ್ಲಿ ಒಬ್ಬರಿದ್ದಾರೆ.**

2022ರ ಡಿಸೆಂಬರ್‌ನಲ್ಲಿ ಒಕ್ಕೂಟ ಸರ್ಕಾರದ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಲೋಕಸಭೆಯಲ್ಲಿ ನೀಡಿದ ಮಾಹಿತಿಯ ಪ್ರಕಾರ ಒಕ್ಕೂಟ ಸರ್ಕಾರದಲ್ಲಿ ಮಾತ್ರವೇ **9.79 ಲಕ್ಷ ಉದ್ಯೋಗಗಳು ಖಾಲಿ ಉಳಿದಿವೆ**. ನಿಗಧಿತ ವೇತನ ಪಡೆಯುವ ಉದ್ಯೋಗ ಕ್ಷೇತ್ರದಲ್ಲಿ ಪುರುಷರ ಪ್ರಮಾಣ ಶೇ.3ರಷ್ಟು ಹಾಗೂ ಮಹಿಳೆಯರ ಪ್ರಮಾಣ ಶೇ.3.8ರಷ್ಟು ಹೆಚ್ಚಿದೆ.



*Data for 2011-12 is from the National Sample Survey (NSS) data. This survey was discontinued and the union government introduced the Periodic Labour Force Survey (PLFS) from 2017-18

# “ನಮ್ಮ ಸರ್ಕಾರವು ಯುವಜನಾಂಗದ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ಯೋಜನಾಬದ್ಧವಾಗಿ ಕೆಲಸಮಾಡುತ್ತಿದೆ”

ವಾಸ್ತವ

# ಯುವಜನಾಂಗದ ಉದ್ಯೋಗ ಸ್ಥಿತಿಗತಿ ಏನು?

ಚಿತ್ರ 1ರಲ್ಲಿ ಎಲ್ಲ ವಯೋಮಾನದ ಹಾಗೂ ಎಲ್ಲ ಶೈಕ್ಷಣಿಕ ಹಿನ್ನೆಲೆಯವರಲ್ಲಿ ನಿರುದ್ಯೋಗದ ಪ್ರಮಾಣ ಎಷ್ಟಿದೆ ಎಂಬ ಮಾಹಿತಿ ನೀಡಲಾಗಿದೆ.

**25**

ವರ್ಷದೊಳಗಿನ ಶೇ.

**42ಷ್ಟು**

ಪದವೀಧರರು **ನಿರುದ್ಯೋಗಿಗಳಾಗಿದ್ದಾರೆ**

**ಚಿತ್ರ 1:** ಎಲ್ಲ ವಯೋಮಾನ ಹಾಗೂ ಎಲ್ಲ ಶೈಕ್ಷಣಿಕ ಹಿನ್ನೆಲೆಯವರಲ್ಲಿ ನಿರುದ್ಯೋಗದ ಪ್ರಮಾಣ

| | Less than 25 | 25-29 | 30-34 | 35-39 | 40+ |
|---|---|---|---|---|---|
| **Graduate and above** | 41.7 | 21.4 | 7.9 | 3.4 | 1.4 |
| **Higher Secondary** | 16.4 | 6.3 | 4.1 | 1.4 | 1.1 |
| **Secondary** | 12.2 | 6.3 | 4.1 | 1.4 | 1.1 |
| **Primary or Middle** | 10.2 | 3.4 | 2.4 | 1.6 | 1.6 |
| **Literate but below primary** | 8.9 | 0.3 | 2.8 | 1.9 | 2.3 |
| **Illiterate** | 7.2 | 2.4 | 2.6 | 0.9 | 2.1 |

*Data source: PLFS 2022-23

## ಒಕ್ಕೂಟ ಸರ್ಕಾರ ಹೇಳುತ್ತಿರುವುದೇನು

ಈ ಸಮಯದಲ್ಲಿ ಜನರಿಗೆ ದೊರಕುವ ಅವಕಾಶಗಳು ಹಾಗು ಆದಾಯಗಳು ಹೆಚ್ಚುತ್ತಿವೆ ಹಾಗು ಬಡತನ ಕಡಿಮೆಯಾಗುತ್ತಿದೆ

ಪ್ರಧಾನ ಮಂತ್ರಿ ಮೋದಿ , **Feb 2024**


‘ನಮ್ಮ ಸರ್ಕಾರದ ಅವಧಿಯಲ್ಲಿ (ಏನ್ ಡಿ ಏ 1) , ರಾಷ್ಟ್ರೀಯ ಕನಿಷ್ಠ ವೇತನದಲ್ಲಿ 42% ಏರಿಕೆ ಆಗಿದೆ. ಮುಂದಿನ ಐದು ವರ್ಷದಲ್ಲಿ ನಾವು ಹೀಗೆ ಮುಂದುವರೆಸುತ್ತೇವೆ ಹಾಗು ಕಾರ್ಮಿಕರಿಗೆ ಗೌರವಯುತ ಕನಿಷ್ಠ ವೇತನವನ್ನು ಖಚಿತಪಡಿಸುತ್ತೇವೆ

**ಬಿಜೆಪಿ ಪ್ರಣಾಳಿಕೆ - 2019**

ವಾಸ್ತವ

# ವಿವಿಧ ಉದ್ಯೋಗಗಳಲ್ಲಿ ದೊರೆಯುತ್ತಿರುವ ವೇತನ ಮತ್ತು ಆದಾಯ

**ಚಿತ್ರ 2:** ನಿಗಧಿತ ವೇತನ ಉದ್ಯೋಗಿಗಳು ಮತ್ತು ದಿನಗೂಲಿ ಕೆಲಸದವರ ಸರಾಸರಿ ವಾರದ ಗಳಿಕೆಯ ಚಿತ್ರಣ (ಹಣದುಬ್ಬರಕ್ಕೆ ಹೊಂದಿಸಿದೆ)





ಈ ಗ್ರಾಫಿನಲ್ಲಿ ಕಂಡುಬರುವಂತೆ, ಜನರ ನಿಜ ಆದಾಯದಲ್ಲಿ ಯಾವುದೇ ಏರಿಕೆ ಕಂಡು ಬರುವುದಿಲ್ಲ. ನಿಜ ಆದಾಯ ಎಂದರೆ, ಹಣದುಬ್ಬರವನ್ನೂ ಪರಿಗಣಿಸಿ, ಆದಾಯವನ್ನು ಅದಕ್ಕೆ ಹೊಂದಿಸಿಕೊಳ್ಳಲಾಗಿದೆ. ಅಂದರೆ, 2011ರಲ್ಲಿ 100 ರೂಪಾಯಿಯ ವಸ್ತುವೊಂದರ ಬೆಲೆ, 2024ಲಿ 100 ರೂಪಾಯಿಯಲ್ಲೇ ಇರುವುದಿಲ್ಲ, ಹೆಚ್ಚಾಗಿರುತ್ತದೆ.ಅದನ್ನು ಹಣದುಬ್ಬರ ಎನ್ನುತ್ತೇವೆ.

ಹಣದುಬ್ಬರಕ್ಕೆ ಹೊಂದಿಸುವುದು ಎಂದರೆ ಎರಡು ಅವಧಿಗಳ ನಡುವಿನ ಬೆಲೆಯನ್ನು ಹೋಲಿಕೆ ಮಾಡಲು ಸಾಧ್ಯವಾಗಿಸುವುದು. ಇಂದು ಜನರು 2011 ಕ್ಕಿಂತಲೂ ಹೆಚ್ಚು ಗಳಿಕೆ ಮಾಡುತ್ತಿದ್ದಲ್ಲಿ ಚಿತ್ರ 2 ಮತ್ತು 3ರಲ್ಲಿರುವ ಗೆರೆಗಳು ಮೇಲಕ್ಕೆ ಏರಬೇಕಿತ್ತು. ಆದರೆ, ಈ ಗೆರೆಗಳು ಏರಿಳಿತವಿಲ್ಲದೆ ಒಂದೇ ಮಟ್ಟದಲ್ಲಿವೆ.

ಅಂದರೆ, ನಿಗಧಿತ ವೇತನ ಪಡೆಯುವ ಉದ್ಯೋಗಿಗಳು, ಸ್ವ ಉದ್ಯೋಗಿಗಳು ಹಾಗೂ ದಿನಗೂಲಿ ಕಾರ್ಮಿಕರು – ಯಾರಿಗೂ ಅವರು ಗಳಿಸುತ್ತಿರುವ ನಿಜ ಆದಾಯ ಹೆಚ್ಚಳವಾಗಿಲ್ಲ. ದಿನಗೂಲಿ ಕಾರ್ಮಿಕರಿಗೆ ಪ್ರತಿದಿನ ಕೆಲಸ ಸಿಗವುದಿಲ್ಲವಾದ್ದರಿಂದ ಅವರು ಹೆಚ್ಚು ದುರ್ಬಲರಾಗಿದ್ದಾರೆ.

# ವಾಸ್ತವ

**ಚಿತ್ರ 3:** ಸ್ವ-ಉದ್ಯೋಗಿಗಳ ವಾರದ ಸರಾಸರಿ ಗಳಿಕೆ (ಹಣದುಬ್ಬರಕ್ಕೆ ಹೊಂದಿಸಲಾಗಿದೆ)




ಒಕ್ಕೂಟ ಸರ್ಕಾರದ ಕಾರ್ಮಿಕ ಹಾಗು ಉದ್ಯೋಗ ಸಚಿವಾಲಯವು ನೇಮಿಸಿದ ಅನೂಪ್ ಸತ್ಪತಿ ಅವರ ನೇತೃತ್ವದ, 2019ರ ಕೂಲಿ/ವೇತನ ಕುರಿತ ತಜ್ಞರ ಸಮಿತಿಯು ಭಾರತದಲ್ಲಿ ಮೂಲ ವೇತನವು ದಿನಕ್ಕೆ ಕನಿಷ್ಠ 375 ರೂಪಾಯಿ ಇರಬೇಕೆಂದು ಸೂಚಿಸಿತ್ತು (national minimum floor wages. ಕಾನೂನಾತ್ಮಕವಾದ ಕನಿಷ್ಠ ಕೂಲಿ ದರವು ರಾಜ್ಯದಿಂದ ರಾಜ್ಯಕ್ಕೆ ಬೇರೆಯಾಗಿದೆ ಆದರೆ ಅದು ಇದಕ್ಕೂ ಕಡಿಮೆ ಇರಬಾರದು) ಪ್ರತಿ ವ್ಯಕ್ತಿಗೆ ಪೌಷ್ಟಕ ಆಹಾರವನ್ನು ಸೇವಿಸಲು ಸಾಧ್ಯವಾಗಬೇಕು ಎಂಬುದರ ಮೇಲೆ ಕನಿಷ್ಠ ವೇತನವನ್ನು ನಿಗದಿಪಡಿಸಲಾಗುತ್ತದೆ. ಜೊತೆಗೆ, ಸಮಿತಿಯು ನಗರಗಳಲ್ಲಿನ ಕಾರ್ಮಿಕರಿಗೆ ಹೆಚ್ಚುವರಿಯಾಗಿ ತಿಂಗಳಿಗೆ ರೂ 1,430 ವಸತಿ ಭತ್ಯೆಯನ್ನು ಸಿಗಬೇಕೆಂದು ಶಿಫಾರಸ್ಸು ಮಾಡಿದೆ.

ಆದಾಗ್ಯೂ, ಈ ಯಾವುದೇ ಶಿಫಾರಸುಗಳನ್ನು ಭಾರತ ಸರ್ಕಾರವು ಅಂಗೀಕರಿಸಿಲ್ಲ. ತಾನು ಏಕೆ ಈ ಶಿಫಾರಸ್ಸುಗಳನ್ನು ಅಂಗೀಕರಿಸಿಲ್ಲ ಎಂಬುದಕ್ಕೆ ಯಾವುದೇ ಅಧಿಕೃತ ಕಾರಣವನ್ನೂ ನೀಡಿಲ್ಲ. 2023 ರಲ್ಲಿ ಕೂಡ national minimum floor wages ಇದ್ದದ್ದು ಕೇವಲ 178 ರೂಪಾಯಿ.*

*https://www.statista.com/statistics/1284710/india-national-floor-level-minimum-wage/

ವಾಸ್ತವ

# NATIONAL MINIMUM FLOOR WAGES/ಮೂಲ ವೇತನಕ್ಕಿಂತಲೂ ಕಡಿಮೆ ಗಳಿಸುತ್ತಿರುವವರು ಎಷ್ಟು ಜನ?

**1/2**

ನಿಗಧಿತ ವೇತನ ಗಳಿಸುವ ನೌಕರರು

**9/10**

ದಿನಗೂಲಿ ಕೆಲಸಗಾರರು

**3/5**


ಸ್ವ-ಉದ್ಯೋಗಿಗಳು

ಸುಮಾರು **30 ಕೋಟಿ** ಜನರು ಮೂಲ ವೇತನಕ್ಕಿಂತಲೂ ಕಡಿಮೆ ಗಳಿಸುತ್ತಿದ್ದಾರೆ ಅಥವಾ ೩೦ ಕೋಟಿ ಜನರ ಬದುಕು ಕಷ್ಟಕರ ಸ್ಥಿತಿಯಲ್ಲಿದೆ ಎನ್ನಬಹುದು.


**30 ಕೋಟಿ ಜನರು ಎಂದರೆ ಜರ್ಮನಿ, ಫ್ರಾನ್ಸ್, ಇಂಗ್ಲೆಂಡ್, ಸ್ಪೇನ್, ನೆದರ್‌ಲ್ಯಾಂಡ್, ಪೋರ್ಚುಗಲ್ ಮತ್ತು ಐರ್ಲ್ಯಾಂಡ್ ದೇಶಗಳ ಜನಸಂಖ್ಯೆಯನ್ನು ಒಟ್ಟು ಸೇರಿಸಿದಷ್ಟಾಗುತ್ತದೆ. ಏಳು ದೇಶಗಳಷ್ಟು ಜನರು ನಮ್ಮ ದೇಶದಲ್ಲಿ ಘನತೆವೆತ್ತ ಬದುಕು ಸಾಗಿಸಲು ಸಾಧ್ಯವಾಗುತ್ತಿಲ್ಲ.**

# ವಾಸ್ತವ


ಚಿತ್ರ 4, ಗ್ರಾಮೀಣ ಮತ್ತು ನಗರಗಳು ಸೇರಿ national minimum floor wages ಗಿಂತಲೂ ಕಡಿಮೆ ಆದಾಯ ಗಳಿಸುವ ಕುಟುಂಬಗಳ ಶೇಕಡಾವಾರು ಪ್ರಮಾಣವನ್ನು ತೋರಿಸುತ್ತದೆ. ಚಿತ್ರ 5 ಗ್ರಾಮೀಣ ಮತ್ತು 6 ನಗರಗಳಲ್ಲಿ ರಾಷ್ಟ್ರೀಯ ಕನಿಷ್ಠ ವೇತನಕ್ಕಿಂತ ಕಡಿಮೆ ಗಳಿಸುವ ಕುಟುಂಬಗಳ ಶೇಕಡಾವಾರು ತೋರಿಸುತ್ತದೆ.




**ಚಿತ್ರ 4:** National minimum floor wages ಕಿಂತ ಕಡಿಮೆ ಗಳಿಸುವ ಕುಟುಂಬಗಳ ಶೇಕಡಾವಾರು ಪ್ರಮಾಣ- ಒಟ್ಟಾರೆ




**ಚಿತ್ರ 5:** National minimum floor wages ಕಿಂತ ಕಡಿಮೆ ಗಳಿಸುವ ಕುಟುಂಬಗಳ ಶೇಕೆಡಾವಾರು ಪ್ರಮಾಣ- ಗ್ರಾಮೀಣ




**ಚಿತ್ರ 6:** National minimum floor wages ಕಿಂತ ಕಡಿಮೆ ಗಳಿಸುವ ಕುಟುಂಬಗಳ ಶೇಕೆಡಾವಾರು ಪ್ರಮಾಣ- ನಗರಪ್ರದೇಶಗಳು

## ಒಕ್ಕೂಟ ಸರ್ಕಾರ ಹೇಳುತ್ತಿರುವುದೇನು



# ‘ನಮ್ಮ ಪ್ರಕಾರ ಅಭಿವೃದ್ಧಿ ಎಂದರೆ ಕಡು ಬಡವರು, ದಲಿತರು, ಆದಿವಾಸಿಗಳು, ಹಿಂದುಳಿದ ಹಾಗೂ ವಂಚಿತ ಸಮುದಾಯಗಳ ಅಭಿವೃದ್ಧಿ’

ಪ್ರಧಾನಮಂತ್ರಿ ಮೋದಿ (2022)

## ವಾಸ್ತವ

ಈ ಅವಧಿಯಲ್ಲಿ ತಲಾ ಜಿಡಿಪಿಯು (ಒಟ್ಟು ಜಿಡಿಪಿಯನ್ನು ಒಟ್ಟು ಜನಸಂಖ್ಯೆಯಿಂದ ಭಾಗಿಸಿದ ಸಂಖ್ಯೆ)

**60%**

ಗಿಂತಲೂ ಹೆಚ್ಚಾಗಿದೆ.


ಆದರೆ ಬಡಜನರ ಆದಾಯ ಹೆಚ್ಚಾಗಿಲ್ಲ.

**34%**

ಕುಟುಂಬಗಳು national minimum floor wages ಗಿಂತಲೂ ಕಡಿಮೆ ಆದಾಯ ಗಳಿಸುತ್ತವೆ.

ಅಂದರೆ, ಜಿಡಿಪಿಯಲ್ಲಿ ಆಗಿರುವ ಹೆಚ್ಚಳವು ಶ್ರೀಮಂತರನ್ನು ಮತ್ತಷ್ಟು ಸಿರಿವಂತರನ್ನಾಗಿಸುತ್ತಿದೆ.

# ಜಿಡಿಪಿ ಬೆಳವಣಿಗೆಯು ಶ್ರೀಮಂತರಿಗೆ ಮಾತ್ರ ಅನುಕೂಲವಾಗಿದೆ ಎನ್ನಲು ಆಧಾರವೆಲ್ಲಿದೆ?




*Source: https://wid.world/country/india/


## ವಾಸ್ತವ

ಶ್ರೀಮಂತರು ಮತ್ತು ಬಡವರ ನಡುವಿನ ಅಂತರವು ಕಣ್ಣಿಗೆ ರಾಚುವುದು ಆದಾಯದ ಅಸಮಾನತೆಗಿಂತಲೂ ಸಂಪತ್ತಿನ ಅಸಮಾನತೆಯಲ್ಲಿ. ಯಾಕೆಂದರೆ ಆದಾಯವು ಒಟ್ಟು ಸಂಪತ್ತಿನ ಒಂದು ಭಾಗ ಮಾತ್ರ. ಒಬ್ಬ ವ್ಯಕ್ತಿಯ ಸಂಪತ್ತಿನಲ್ಲಿ ಅವರಿಗೆ ಎಲ್ಲ ಮೂಲಗಳಿಂದ ಬರುವ ಆದಾಯಗಳು ಸೇರಿರುತ್ತವೆ- ವೇತನ/ ಕೂಲಿ, ಬಾಡಿಗೆ, ಬಡ್ಡಿ, ಸ್ಟಾಕ್, ಹಾಗೂ ಇತರೆ ಆಸ್ತಿಗಳಾದ ಭೂಮಿ, ಕಾರು, ಮನೆ ಇತ್ಯಾದಿಗಳೆಲ್ಲ ಸೇರುತ್ತದೆ.

ಚಿತ್ರ 7ರಲ್ಲಿ ಒಟ್ಟು ಜನಸಂಖ್ಯೆಯಲ್ಲಿ ಮೇಲಿನ ಶೇ.10% ಜನರು ಹಾಗೂ ಕೆಳಗಿನ ಶೇ.30 ಜನರು ಹೊಂದಿರುವ ಸಂಪತ್ತಿನ ಪಾಲನ್ನು ತೋರಿಸಲಾಗಿದೆ.

೧. 2012ರಲ್ಲಿ **ಮೇಲಿನ ಶೇ.10%ರಷ್ಟು ಜನರು ದೇಶದ ಒಟ್ಟು ಸಂಪತ್ತಿನಲ್ಲಿ ಶೇ.63% ಅನ್ನು ಹೊಂದಿದ್ದರು.** 2022ರಲ್ಲಿ ಈ ಪ್ರಮಾಣ ಶೇ.64.5%ಕೆ ಏರಿದೆ.

೨. 2012ರಲ್ಲಿ **ಕೆಳಗಿನ ಶೇ.50%ಷ್ಟು ಜನರು ದೇಶದ ಒಟ್ಟು ಸಂಪತ್ತಿನಲ್ಲಿ ಶೇ.6.1% ಭಾಗ ಹೊಂದಿದ್ದರು**. 2022ರಲ್ಲಿ ಈ ಪ್ರಮಾಣ ಶೇ.5.6% ಗೆ ಇಳಿದಿದೆ.




**ಚಿತ್ರ 7:** ಭಾರತದ ಜನಸಂಖ್ಯೆಯ ಮೇಲಿನ ಶೇ.10 ಹಾಗೂ ಕೆಳಗಿನ ಶೇ.50 ಜನರು ಹೊಂದಿರುವ ಸಂಪತ್ತಿನ ಪ್ರಮಾಣ

### ಅಸಮಾನತೆಯ ಹೆಚ್ಚಳದಿಂದ ಕಷ್ಟಕ್ಕೆ ಈಡಾದವರು ಯಾರು?

ದುರ್ಬಲ ವರ್ಗಗಳ ಜನರು, ಮಹಿಳೆಯರು, ಮಕ್ಕಳು ಈ ಅಸಮಾನತೆಯ ಹೊರೆಯಿಂದ ತೀವ್ರವಾಗಿ ಬಳಲುತ್ತಾರೆ. ಅಸಮಾನತೆ ಮತ್ತು ಅಸಮತೆಗಳು ಹೆಚ್ಚಿದಂತೆಲ್ಲ ಈ ಜನರು ಸುರಕ್ಷತೆಯಿಲ್ಲದೆ ಮತ್ತಷ್ಟು ಕಾರ್ಪಣ್ಯಗಳಿಗೆ ಗುರಿಯಾಗುತ್ತಾರೆ. ಕೊರೊನಾ ಸಾಂಕ್ರಾಮಿಕದ ಸಮಯದಲ್ಲಿ ಈ ಅಸಮಾನತೆಯ ಸಮಾಜದಲ್ಲಿ ಬಡವರು, ದುರ್ಬಲ ವರ್ಗದವರು ಸಂಕಷ್ಟಗಳಿಂದ ಪಾರಾಗಲು ಯಾವುದೇ ದಾರಿಯಿಲ್ಲದೆ ಹೇಗೆ ಬಳಲಿದರು ಎನ್ನುವುದನ್ನು ನೋಡಿದ್ದೇವೆ. ಅದು ಒಂದು ಸೂಚಕ.

# ಸುಧಾರಿಸಲು ಏನು ಮಾಡಬಹುದು?

ಹಸಿದಿರುವವರು,  ಅನಾರೋಗ್ಯ ಪೀಡಿತರು ಹಾಗೂ ಅಶಿಕ್ಷಿತರು ಉತ್ಪಾದನೆಯಲ್ಲಿ ತೊಡಗಿಕೊಳ್ಳುವುದು ಕಷ್ಟಸಾಧ್ಯ. ವೇತನದ ಸ್ಥಿರತೆ ಮತ್ತು ತೀವ್ರ ಮಟ್ಟದ ಅಸಮಾನತೆಗಳು ಅನೈತಿಕವಾದದ್ದು ಮಾತ್ರವಲ್ಲ, ಅವು ಸಂವಿಧಾನದ ಆಶಯಗಳಿಗೆ ವಿರುದ್ಧವಾದದ್ದು ಹಾಗೂ ದೇಶದ ಆರ್ಥಿಕ ಪ್ರಗತಿಗೆ ಮಾರಕವಾದದ್ದು.

ಹಸಿವಿಲ್ಲದ, ಆರೋಗ್ಯಪೂರ್ಣವಾದ, ಉತ್ತಮ ಪೌಷ್ಟಿಕಾಂಶ ಮತ್ತು ಉತ್ತಮ ಶಿಕ್ಷಣ ಪಡೆದ ಸಮಾಜವು ದೇಶದ ಒಟ್ಟು ಆರೋಗ್ಯಕ್ಕೆ ಅಪೇಕ್ಷಣೀಯ ಮಾತ್ರವಲ್ಲ, ದೇಶದ ಆರ್ಥಿಕ ಪ್ರಗತಿಗೆ ಅನಿವಾರ್ಯ. ಈ ಕೆಳಗಿನ ಅಂಶಗಳು ರಾಜಿ-ರಹಿತವಾದ ನ್ಯಾಯಸಮ್ಮತವಾದ ಸಾಮಾಜಿಕ-ಆರ್ಥಿಕ ಹಕ್ಕುಗಳಾಗಿವೆ.*

ಇವುಗಳನ್ನು ಜಾರಿಗೆ ತರಲು ದೇಶದ ಒಟ್ಟು ಜಿಡಿಪಿಯಲ್ಲಿ

**10%**

ಅನ್ನು ಸಾಮಾಜಿಕ ಭದ್ರತೆಗೆಂದು ಮೀಸಲಿಡಬೇಕು . ಈಗಿರುವ ಆದಾಯ ಮೂಲಗಳ ಜೊತೆಗೆ, ಜನಸಂಖ್ಯೆಯ ಮೇಲ್ಪದರದ ಶೇ.1ರಷ್ಟು ಜನರು ಹೊಂದಿರುವ ಸಂಪತ್ತಿನ ಮೇಲೆ

**2%**

ತೆರಿಗೆಯನ್ನು ವಿಧಿಸಬಹುದು ಹಾಗೂ ಪಿತ್ರಾರ್ಜಿತ ಆಸ್ತಿಗಳ ಮೇಲೆ ಶೇ.

**33.3%**

ತೆರಿಗೆ ವಿಧಿಸುವುದರಿಂದ ಈ ಮೇಲಿನ ಹಕ್ಕುಗಳನ್ನು ಜಾರಿಗೆ ತರಲು ಬೇಕಾದ ಸಂಪನ್ಮೂಲವನ್ನು ಕ್ರೂಢೀಕರಿಸಬಹುದು

**ಎಲ್ಲರಿಗೂ ಆಹಾರದ ಹಕ್ಕು**

**ಎಲ್ಲರಿಗೂ ಉದ್ಯೋಗ, ಘನತೆವೆತ್ತ ಬದುಕು ನಡೆಸುವಷ್ಟು ಮತ್ತು ಸಮಯಕ್ಕೆ ಸರಿಯಾಗಿ ವೇತನ ಪಾವತಿಯ ಹಕ್ಕು**

**ಉಚಿತ ಮತ್ತು ಗುಣಮಟ್ಟದ ಆರೋಗ್ಯ ಸೇವೆಗಳ ಹಕ್ಕು**

**ಉಚಿತ ಮತ್ತು ಗುಣಮಟ್ಟದ ಶಿಕ್ಷಣದ ಹಕ್ಕು**

**ಪಿಂಚಣಿಯ ಹಕ್ಕು**


*See chapter 1, For a set of universal economic rights by Prabhat Patnaik and Jayati Ghosh in 'We the People: Establishing Rights and Deepening Democracy' edited by Nikhil Dey, Aruna Roy and Rakshita Swamy

# 2024ನೇ ಸಾಲಿನ ಬಜೆಟ್‌ನಲ್ಲಿ ಬಿಜೆಪಿಯ ಆದ್ಯತೆ ಏನು?

ಸಾಮಾಜಿಕ ಭದ್ರತೆಯನ್ನು ಕಲ್ಪಿಸುವ ಯೋಜನೆಗಳಿಗಾಗಿ ಈ ಸರ್ಕಾರ ನೀಡಿರುವ ಒಟ್ಟು ಅನುದಾನವು ಜಿಡಿಪಿಯ ಶೇ.0.4% ಮಾತ್ರ ಇದೆ. ಇದನ್ನು ಚಿತ್ರ 8ಲ್ಲಿ ತೋರಿಸಲಾಗಿದೆ.*



**ಚಿತ್ರ 8** ಐದು ಸಾಮಾಜಿಕ ಯೋಜನೆಗಳಿಗೆ ನೀಡಲಾದ ಅನುದಾನ ಹಾಗೂ ಜಿಡಿಪಿಯಲ್ಲಿ ಅವುಗಳ ಪಾಲು




*Combined expenditure on Mid-Day Meals, Integrated Child Development Services (ICDS) scheme, Pradhan Mantri Matru Vandana Yojana (PMMVY), National Rural Employment Guarantee Act (NREGA) and National Social Assisstance Programme (NSAP).
Source: Budget at a glance, various years.

*Source: https://twitter.com/roadscholarz/status/1753006844497334626/photo/1

TEN YEARS OF NDA • A GUARANTEE CHECK •

# ಉದ್ಯೋಗ, ವೇತನ ಮತ್ತು ಅಸಮಾನತೆ

**Email** bahutvakarnataka@gmail.com
**Facebook** Bahutva Karnataka
**Instagram** @bahutvakarnataka
**Twitter** @BahutvaKtka